ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
KARNATAKA LEGISLATIVE ASSEMBLY RESEARCH AND REFERENCE BRANCH

ಪತ್ರಿಕಾ ತುಣುಕುಗಳು
**PAPER CLIPPINGS**

ಇಲಾಖೆ / ವಿಷಯ : DEPARTMENT / SUBJECT:

ಪತ್ರಿಕೆಯ ಹೆಸರು : NAME OF THE NEWS PAPER:

ದಿನಾಂಕ : DATE : 13/12/19

# ಪೋಷಕರ ಕಡೆಗಣಿಸಿದರೆ 6 ತಿಂಗಳು ಜೈಲು



**ಹೊಸದಿಲ್ಲಿ:** ಹಿರಿಯ ನಾಗರಿಕರು ಮತ್ತು ಪೋಷಕರ ನಿರ್ವಹಣೆ ಮತ್ತು ಕಲ್ಯಾಣ ತಿದ್ದುಪಡಿ ಕಾಯ್ದೆ-2019 ಲೋಕಸಭೆಯಲ್ಲಿ ಮಂಡನೆಯಾಗಿದೆ. ಹಿರಿಯ ನಗರಿಕರು ಅಥವಾ ಪೋಷಕರನ್ನು ನಿಂದಿಸುವವರಿಗೆ, ಹಿರಿಯರ ಆರೈಕೆಗೆ ಬೇಜವಾಬ್ದಾರಿ ತೋರುವ, ಕಾನೂನ್ನು ಮೀರಿ ತಾಯಿ ತಂದೆಯರನ್ನು ನಿರ್ಲಕ್ಷಿಸುವ ಮಕ್ಕಳಿಗೆ ಆರು ತಿಂಗಳು ಜೈಲು ಶಿಕ್ಷೆ ಹಾಗೂ 10 ಸಾವಿರ ರು. ದಂಡ ವಿಧಿಸುವ ಕಠಿಣ ನಿಯಮ ವಿಧೇಯಕದಲ್ಲಿದೆ.

ಸಾಮಾಜಿಕ ನ್ಯಾಯ ಮತ್ತು ಕಲ್ಯಾಣ ಸಚಿವ ತಾವರ್‌ಚಂದ್ ಗೆಹ್ಲೋಟ್ ಅವರು ವಿಧೇಯಕ ಮಂಡಿಸಿ, 'ಪೋಷಕರು ಮತ್ತು ಹಿರಿಯ ನಾಗರಿಕರ ಮೂಲಭೂತ ಅಗತ್ಯತೆಗಳು, ಸುರಕ್ಷತೆ, ಭದ್ರತೆ, ಆಶ್ರಯ ಹಾಗೂ ಸಂಸ್ಥೆಗಳ ನಿರ್ವಹಣೆ ಮತ್ತು ನಿಯಂತ್ರಣ ಕುರಿತು ಸಂವಿಧಾನದಡಿ ಖಾತರಿಪಡಿಸಿದ ಹಕ್ಕುಗಳನ್ನು ಇದು ಒದಗಿಸುತ್ತದೆ' ಎಂದು ಹೇಳಿದರು.

ತಿದ್ದುಪಡಿ ವಿಧೇಯಕದಲ್ಲಿ ಹಿರಿಯರ ಆರೈಕೆ ಕೇಂದ್ರಗಳ ನೋಂದಣಿಯನ್ನು ಕಡ್ಡಾಯಗೊಳಿಸಲಾಗಿದೆಯಲ್ಲದೇ ಸ್ಥಾಪನೆಗೆ ನಿರ್ದಿಷ್ಟ ಮಾನದಂಡಗಳನ್ನು ವಿಧಿಸಲಾಗಿದೆ. 'ದುರ್ವರ್ತನೆ' ಎಂಬ ಪದದ ವ್ಯಾಖ್ಯಾನವನ್ನು ದೈಹಿಕ ಹಲ್ಲೆ, ದೈಹಿಕ ಮತ್ತು ಮಾನಸಿಕ ಶೋಷಣೆ, ಬಯ್ಯುಳದ ನಿಂದನೆ, ನಿರ್ಲಕ್ಷ್ಯ, ಆರ್ಥಿಕ ಶೋಷಣೆ ಎಂಬರ್ಥದಲ್ಲಿ ವಿಸ್ತರಿಸಲಾಗಿದೆ. ಇನ್ನು 'ಮಕ್ಕಳು' ಎಂಬ ಪದವನ್ನು ತಂದೆ-ತಾಯಿಗೆ ಜೈವಿಕವಾಗಿ ಜನಿಸಿದವರಷ್ಟೆ ಅಲ್ಲದೇ ದತ್ತು ತೆಗೆದುಕೊಂಡವರನ್ನೂ ಒಳಗೊಂಡಂತೆ ವ್ಯಾಖ್ಯಾನಿಸಲಾಗಿದೆ. ಅಳಿಯ, ಸೊಸೆ, ಮೊಮ್ಮಗ, ಮೊಮ್ಮಗಳು ಸಹ ಕಾನೂನಾತ್ಮಕವಾಗಿ ಹಿರಿಯರ ಪೋಷಣೆಯ ಜವಾಬ್ದಾರರಾಗಿರುತ್ತಾರೆ ಎಂದು ತಿಳಿಸಲಾಗಿದೆ.

**ಸಂಸತ್ತಿನ ಸ್ಥಾಯಿ ಸಮಿತಿಗೆ:** ವೈಯಕ್ತಿಕ ಮಾಹಿತಿ ರಕ್ಷಣಾ ವಿಧೇಯಕವನ್ನು ಕೇಂದ್ರ ಸಚಿವ ರವಿಶಂಕರ್ ಪ್ರಸಾದ್ ಬುಧವಾರ ಸಂಸತ್ತಿನ ಜಂಟಿ ಸ್ಥಾಯಿ ಸಮಿತಿಗೆ ಒಪ್ಪಿಸಿದ್ದು, ಸಮಿತಿಯು ಒಂದಷ್ಟು ತಿದ್ದುಪಡಿಗಳ ಶಿಫಾರಸಿನೊಂದಿಗೆ ಬಜೆಟ್ ಅಧಿವೇಶನದ ಅಂತ್ಯದೊಳಗೆ ವರದಿ ಸಲ್ಲಿಸಲಿದೆ.

## ತಿದ್ದುಪಡಿ ಏನು ಹೇಳುತ್ತದೆ?

- ಮಕ್ಕಳಿಗೆ ಆರು ತಿಂಗಳು ಜೈಲು ಶಿಕ್ಷೆ ಹಾಗೂ 10 ಸಾವಿರ ರು. ದಂಡ.
- ಹಿರಿಯರ ಆರೈಕೆ ಕೇಂದ್ರಗಳ ನೋಂದಣಿಯನ್ನು ಕಡ್ಡಾಯ.
- 80 ವರ್ಷಕ್ಕಿಂತ ಮೇಲ್ಪಟ್ಟವರ ದೂರುಗಳನ್ನು ಪ್ರಾಧಿಕಾರ 60 ದಿನದಲ್ಲಿ ಇತ್ಯರ್ಥಪಡಿಸಬೇಕು. ಕೆಲವು ನಿರ್ದಿಷ್ಟ ಪ್ರಕರಣಗಳಲ್ಲಿ ಹೆಚ್ಚುವರಿ 30 ದಿನ ಕಾಲಾವಕಾಶಕ್ಕೆ ಅವಕಾಶ.
- ಮಕ್ಕಳ ದುಡಿಮೆ ಆಧರಿಸಿ ನಿರ್ವಹಣಾ ವೆಚ್ಚ ನಿಗದಿಪಡಿಸಲು ಅವಕಾಶ.
- ಪ್ರತಿ ಪೊಲೀಸ್ ಠಾಣೆಯಲ್ಲಿ ನೋಡಲ್ ಅಧಿಕಾರಿ ನೇಮಕ, ಜಿಲ್ಲಾಮಟ್ಟದಲ್ಲಿ ವಿಶೇಷ ಪೊಲೀಸ್ ಘಟಕ.
- ಗರಿಷ್ಠ 10 ಸಾವಿರ ರು. ದಂಡ, 6 ತಿಂಗಳ ಸೆರೆವಾಸ ಶಿಕ್ಷೆ ಅಥವಾ ಎರಡನ್ನೂ ವಿಧಿಸಲು ಅವಕಾಶ.